


**ನೂರ್ ಇನಾಯತ್ ಖಾನ್**
ನಾಝಿ ಹೋರಾಟದ ಆರ್ದ್ರ ಕಾವ್ಯ
ಲೇ: ಚಂದ್ರಶೇಖರ್ ಮಂಡೆಕೋಲು
ಪು: 180 ಬೆ: ರೂ. 160
ಪ್ರ: ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ, ಕಂಟ್ರಿ ಕ್ಲಬ್
ಎದುರು, ವಿದ್ಯಾನಗರ,
ಶಿವಮೊಗ್ಗ – 577 203
ಮೊ: 9449174662

‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.

ತಮ್ಮ ಮಡಿವಂತಿಕೆಯ ಮೈಲಿಗೆಯನ್ನು ಕಳೆದುಕೊಂಡು ಅವರು ಸಂಗೀತ ಕಲಿಸಿದರು. ಮತ್ತೆ ಮೈಸೂರು ಅರಮನೆಗೆ ಮೌಲಾ ಭಕ್ಷ್ ಬಂದು ಕೃಷ್ಣರಾಜ ಒಡೆಯರೆದುರಿಗೆ ಸಂಗೀತ ಕಛೇರಿಯನ್ನು ನೀಡಿದಾಗ ಆ ಹಾಡುಗಾರಿಕೆಗೆ ಮನಸೋತ ಒಡೆಯರ್ ಚಿನ್ನದ ಹಾರ, ಚಿನ್ನದ ಕಿರೀಟ ತೊಡಿಸಿ ಪಲ್ಲಕ್ಕಿ ಮೆರವಣಿಗೆಯ ರಾಜಮರ್ಯಾದೆ ಕೊಡುತ್ತಾರೆ. ಈ ಮೌಲಾ ಭಕ್ಷ್ ಮದುವೆಯಾದದ್ದು ಟಿಪ್ಪುವಿನ ಮೊಮ್ಮಗಳನ್ನು. ಮದುವೆಯ ನಂತರ ಮೈಸೂರು ಬಿಟ್ಟು ಬರೋಡೆಯ ಆಸ್ಥಾನದಲ್ಲಿ ಇವರು ಆಸ್ಥಾನ ವಿದ್ವಾಂಸರಾದರು. ಆಸ್ಥಾನದಲ್ಲಿರುವಷ್ಟು ಹೊತ್ತು ಈತ ಒಡೆಯರ್ ಕೊಟ್ಟ ಕಿರೀಟ ಮತ್ತು ರಾಜದಂಡ ಹಿಡಿದಿರುತ್ತಿದ್ದರು. ಸಹಜವಾಗಿಯೇ ರಾಜ ಕೇಳಿದ್ದು, “ನೀನೇ ಕಿರೀಟ ರಾಜದಂಡ ಹಿಡಿದರೆ, ರಾಜ ನಾನು ಏನನ್ನು ತೊಡುವುದು?” ಮೌಲಾ ಭಕ್ಷ್ ಉತ್ತರಿಸಿದ್ದು ಪ್ರಖ್ಯಾತ ಸಂಸ್ಕೃತ ಶ್ಲೋಕವನ್ನು. “ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ” ಇಂತಹ ಮೌಲಾ ಭಕ್ಷ್ ಮೊಮ್ಮಗ ಇನಾಯತ್ ಖಾನ್. ಮೌಲಾ ಭಕ್ಷ ಮನೆಯ ವಾತಾವರಣದಲ್ಲೇ ಸರ್ವಧರ್ಮಗಳ ವಾತಾವರಣವಿತ್ತು. ಜಾತಿ ಧರ್ಮಗಳ ಹಂಗಿರದ, ಸಂಗೀತ ಧರ್ಮದ ಕುಟುಂಬವಾಗಿತ್ತು ಅದು. ಇದರ ಮೂಲ ಸೂಫಿ ಸಂಗೀತ. ಇಂತಹ ವಾತಾವರಣದಲ್ಲಿ ಬೆಳೆದ ಇನಾಯತ್ ಖಾನ್ ಅಜ್ಜನನ್ನು ಕಳೆದುಕೊಂಡದ್ದು ತನ್ನ 14ರ ಹರೆಯದಲ್ಲಿ. ಆ ಹೊತ್ತಿಗಾಗಲೇ ಇನಾಯತ್ ಖಾನ್ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಅದೇ